ತಂತಿ ವಿಳಾಸ: ಯೂನಿಸರಜಾ
ದೂರವಾಣಿ ಸಂಖ್ಯೆ: 2419677/2419361
e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ:1916
(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)
(ಎನ್.ಐ.ಆರ್.ಎಫ್.-2024: ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ, ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು
ದಿನಾಂಕ 04.09.2025

ಸಂಖ್ಯೆ:ಜಿಎಲ್5/60/2025-26

## ಸು ತ್ತೋ ಲೆ

ವಿಷಯ: ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಪದವಿ ಕಾಲೇಜುಗಳು ಸೆಪ್ಟೆಂಬರ್/ಅಕ್ಟೋಬರ್ 2025ರ ಮಾಹೆಗಳಲ್ಲಿ ಒಂದು ದಿನದ ರೋವರಿಂಗ್- ರೇಂಜರಿಂಗ್ ಪ್ರಾರಂಭಿಕ ಶಿಬಿರವನ್ನು ಸಂಘಟಿಸುವ ಬಗ್ಗೆ.

ಉಲ್ಲೇಖ: P.G.R Sindhia, State Chief Commissioner, The Bharat Scouts & Guides, Bengaluru Letter No. BSG/SHQ/884/2025-26, Date: 12.08.2025

*****

ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಎಲ್ಲಾ ಸಂಯೋಜಿತ/ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳ ಗಮನಕ್ಕೆ ತರುತ್ತಾ, ಸೆಪ್ಟೆಂಬರ್/ಅಕ್ಟೋಬರ್ 2025ರ ಮಾಹೆಗಳಲ್ಲಿ ಒಂದು ದಿನದ ರೋವರಿಂಗ್-ರೇಂಜರಿಂಗ್ ಪ್ರಾರಂಭಿಕ ಶಿಬಿರವನ್ನು ರಾಜ್ಯದ ಸ್ಕೌಟಿಂಗ್-ಗೈಡಿಂಗ್‌ನಲ್ಲಿ ನುರಿತ ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿಯನ್ನು ನೀಡಲಾಗುವುದೆಂದು ತಿಳಿಸಿರುತ್ತಾರೆ ಹಾಗೂ ಪ್ರತಿ ಕಾಲೇಜಿನಿಂದ ಇದುವರೆವಿಗೂ ತರಬೇತಿಯನ್ನು ಹೊಂದದೆ ಇರುವಂತಹ ರೋವರ್ ವಿಭಾಗಕ್ಕೆ ಒಬ್ಬ ಪುರುಷ ಉಪನ್ಯಾಸಕರನ್ನು ಮತ್ತು ರೇಂಜರ್ ವಿಭಾಗಕ್ಕೆ ಒಬ್ಬರು ಮಹಿಳಾ ಉಪನ್ಯಾಸಕಿಯನ್ನು ನೇಮಿಸಲು, ಒಂದು ದಿನದ ಪ್ರಾರಂಭಿಕ ಶಿಬಿರದಲ್ಲಿ ಭಾಗವಹಿಸಲು ತಿಳಿಸುವುದು ಮತ್ತು ಸದರಿ ದಿನದ ಗೈರು ಹಾಜರಿಯನ್ನು ಅನ್ಯಕಾರ್ಯನಿಮಿತ್ತವೆಂದು ಪರಿಗಣಿಸಲು ಅನುಮತಿ ನೀಡಲು ಕ್ರಮವಹಿಸುವಂತೆ ತಿಳಿಸಲಾಗಿದೆ. ಹೆಚ್ಚಿನ ವಿವರಣೆಗಳಿಗಾಗಿ ಉಲ್ಲೇಖಿತ ಪತ್ರವನ್ನು ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಈ ಸಂಬಂಧ ಸೂಕ್ತ ಕ್ರಮಕೈಗೊಳ್ಳುವಂತೆ ಈ ಮೂಲಕ ತಿಳಿಸಲಾಗಿದೆ.

ಕುಲಸಚಿವರಿಂದ ಕರಡು ಅನುಮೋದಿಸಿದೆ.

Channa Keshava
ಉಪ ಕುಲಸಚಿವರು(ಸಾಮಾನ್ಯ) 4/9
ಆಡಳಿತ
ಮೈ.ವಿ.ವಿ. ಮೈಸೂರು

ಇವರಿಗೆ:

1 ಡಾ. ದಿವಾಕರ್ ಚಾಂಡಿ, ಸಹ ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
2 ವಿಶ್ವವಿದ್ಯಾನಿಲಯದ ಘಟಕ/ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು, ಮೈವಿವಿ, ಮೈಸೂರು
3 ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯಭವನ, ಮಾನಸಗಂಗೋತ್ರಿ, ಮೈಸೂರು
4 ಸಿಸ್ಟಮ್-ಕೋರ್ಡಿನೇಟರ್, ಮಾಹಿತಿ ಮತ್ತು ಸಂವಹನ(ಐಸಿಡಿ), ಗಣಕವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ- ವಿಭಾಗದಿಂದ ಬರುವ ಮಾಹಿತಿಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಕೋರಿದೆ
5 ರಾಜ್ಯ ಮುಖ್ಯ ಆಯುಕ್ತರು, ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ,ರಾಜ್ಯ ಪ್ರಧಾನ ಕಚೇರಿ, ನಂ.39, ಶಾಂತಿ ಗೃಹ, ಮಹಾರಾಣಿ ವಿಜ್ಞಾನ ಕಾಲೇಜು, ಅರಮನೆ ರಸ್ತೆ, ಬೆಂಗಳೂರು-560001
6 ಮಾನ್ಯ ಕುಲಪತಿ /ಕುಲಸಚಿವರ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
7 ಕಛೇರಿ ಪ್ರತಿ.

06/09/2025

KULASACHIVARA KACHERI stamp:
ಕುಲಸಚಿವರ ಕಛೇರಿ
ಮೈ. ವಿ. ವಿ ಮೈಸೂರು
M-1479
16/8/25


...NDHIA, B.E. (Civil)
...HIEF COMMISSIONER
... Minister for Health, Finance,
...e, Industries & Transport
...vernment of Karnataka

State Headquarters
No. 39, "Shanthigruha"
Palace Road
Bengaluru-560 001


# ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

# THE BHARAT SCOUTS & GUIDES, KARNATAKA

Date : 12-8-2025

Ref : BSG/SHQ/884/2025-26

ಮಾನ್ಯರೆ,

ವಿಷಯ:-2025-26ನೇ ಸಾಲಿನಲ್ಲಿ ಪದವಿ ಕಾಲೇಜುಗಳ ಉಪನ್ಯಾಸಕ ಮತ್ತು ಉಪನ್ಯಾಸಕಿಯರುಗಳಿಗೆ ಆಗಸ್ಟ್/ಸೆಪ್ಟೆಂಬರ್/ಅಕ್ಟೋಬರ್ 2025 ಮಾಹೆಗಳಲ್ಲಿ ಒಂದು ದಿನದ ರೋವರಿಂಗ್-ರೇಂಜರಿಂಗ್ ಪ್ರಾರಂಭಿಕ ಶಿಬಿರವನ್ನು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಸಂಘಟಿಸುವ ಬಗ್ಗೆ, ಅನುಮತಿಯ ಆದೇಶ ನೀಡಲು ಮನವಿ ಕುರಿತು.

*****

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯಿಂದ ರಾಜ್ಯದ ಪ್ರತಿಯೊಂದು ಸರ್ಕಾರಿ, ಅನುದಾನಿತ, ಅನುದಾನರಹಿತ ಪದವಿ ಕಾಲೇಜುಗಳ ಉಪನ್ಯಾಸಕ ಮತ್ತು ಉಪನ್ಯಾಸಕಿಯರುಗಳಿಗೆ ರೋವರಿಂಗ್-ರೇಂಜರಿಂಗ್ ಶಿಕ್ಷಣದ ಬಗ್ಗೆ ಒಂದು ದಿನದ ಪ್ರಾರಂಭಿಕ ಶಿಬಿರವನ್ನು ಪ್ರತಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವ ಪದವಿ ಕಾಲೇಜುಗಳವರಿಗೆ ಆಯೋಜಿಸಿ ನಿರ್ವಹಿಸುವಲ್ಲಿ ತಮ್ಮ ಅನುಮತಿಯ ಆದೇಶವನ್ನು ನೀಡಲು ವಿನಂತಿಸುತ್ತೇನೆ. ಈ ಒಂದು ದಿನದ ಪ್ರಾರಂಭಿಕ ಶಿಬಿರದಲ್ಲಿ ರಾಜ್ಯದ ಸ್ಕೌಟಿಂಗ್-ಗೈಡಿಂಗ್‌ನಲ್ಲಿ ನುರಿತ ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿಯನ್ನು ನೀಡಲಾಗುವುದು.

ಒಂದು ದಿನದ ಪ್ರಾರಂಭಿಕ ಶಿಬಿರಕ್ಕೆ ತಮ್ಮ ವ್ಯಾಪ್ತಿಯ ಪದವಿ ಕಾಲೇಜುಗಳಲ್ಲಿ ಇದುವರೆವಗೂ ತರಬೇತಿಯನ್ನು ಹೊಂದದೆ ಇರುವಂತಹ ರೋವರ್ ವಿಭಾಗಕ್ಕೆ ಒಬ್ಬ ಪುರುಷ ಉಪನ್ಯಾಸಕರನ್ನು, ರೇಂಜರ್ ವಿಭಾಗಕ್ಕೆ ಒಬ್ಬರು ಮಹಿಳಾ ಉಪನ್ಯಾಸಕಿಯರನ್ನು ಕಡ್ಡಾಯವಾಗಿ ಕಾಲೇಜುಗಳಿಂದ ನಿಯೋಜಿಸುವುದು.

ಹಾಗೂ ಈಗಾಗಲೇ ತರಬೇತಿಯನ್ನು ಹೊಂದಿದ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ ಉಪನ್ಯಾಸಕ/ಉಪನ್ಯಾಸಕಿಯರನ್ನು ಈ ಒಂದು ದಿನದ ಪ್ರಾರಂಭಿಕ ಶಿಬಿರದಲ್ಲಿ ಭಾಗವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಪದವಿ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಕ್ತ ಆದೇಶ ನೀಡಲು ವಿನಂತಿಸುತ್ತೇನೆ.

GLS
16/8/25
16/8/25

ಭಾಗವಹಿಸುವ ಉಪನ್ಯಾಸಕರುಗಳಿಗೆ ಊಟೋಪಚಾರದ ವ್ಯವಸ್ಥೆ, ಖರ್ಚು ಸೇರಿದಂತೆ ಶಿಬಿರದಲ್ಲಿ ಭಾಗವಹಿಸುವ ಪ್ರತಿಯೊಬ್ಬ ಉಪನ್ಯಾಸಕ-ಉಪನ್ಯಾಸಕಿಯರು ಪಾವತಿಸಬೇಕಾಗಿರುವ ಒಟ್ಟು ಶುಲ್ಕದ ವಿವರ ಕೆಳಕಂಡಂತಿದೆ :

| | |
|---|---|
| ಶಿಬಿರದ ನೊಂದಣಿ ಶುಲ್ಕ | ರೂ.156/- |
| ರೋವರ್-ರೇಂಜರ್ ಘಟಕಗಳ ನೊಂದಣಿ/ನವೀಕರಣ ಶುಲ್ಕ | ರೂ.194/- |
| ಸ್ಕೌಟ್-ಗೈಡ್ ಮಾಸಪತ್ರಿಕೆ ವಾರ್ಷಿಕ ಶುಲ್ಕ | ರೂ.200/- |
| ಒಟ್ಟು | **ರೂ.550/-** |

...2

ಈ **ರೂ.550/-ಗಳನ್ನು** ಅಭ್ಯರ್ಥಿಗಳು ತರಬೇತಿಗೆ ಹಾಜರಾಗುವ ಸಂದರ್ಭದಲ್ಲಿ ಪಾವತಿಸಬೇಕಾಗಿರುತ್ತದೆ. ಈ ಅಭ್ಯರ್ಥಿಗಳು ಶಿಬಿರಕ್ಕೆ ಬಂದು ಹೋಗುವ ಪ್ರಯಾಣ ವೆಚ್ಚದೊಂದಿಗೆ ಮೇಲ್ಕಂಡ ರೂ.550/- ವೆಚ್ಚವನ್ನು ಪದವಿ ಕಾಲೇಜುಗಳ ರೋವರ್-ರೇಂಜರ್ ಚಾಲ್ತಿ ಅಥವಾ ಸಂಚಿತ ನಿಧಿಯಿಂದ ಭರಿಸಲು ಮತ್ತು ಆ ದಿನದ ಗೈರು ಹಾಜರಿಯನ್ನು ಅನ್ಯ ಕಾರ್ಯನಿಮಿತ್ತ ಎಂದು ಪರಿಗಣಿಸಲು ಅನುಮತಿ ನೀಡಿ ಸೂಕ್ತ ಆದೇಶ ನೀಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇನೆ.

ಸ್ಕೌಟ್ ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್.ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

**ಮಾನ್ಯ ಕುಲಸಚಿವರು**
ಮೈಸೂರು, ವಿಶ್ವವಿದ್ಯಾಲಯ
ಮೈಸೂರು